

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನಿಗೂಢ ಸತ್ಯ......

ಮನುಷ್ಯನ ಮನಸ್ಸು ಬಹಳ ಜಟಿಲ (complicated) ಮತ್ತು ಸಂಕೀರ್ಣ (complex). ಶರೀರವನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿ ಅದರ ರೋಗರುಜಿನಗಳನ್ನು ಖಚಿತಪಡಿಸಿಕೊಳ್ಳುವಂತೆ ಮನಸ್ಸನ್ನು ಸುಲಭವಾಗಿ ಪರೀಕ್ಷೆಗೆ ಒಳಪಡಿಸಲು ಯಾವ ನಿರ್ದಿಷ್ಟ ಪ್ರಯೋಗಾಲಯವಿಲ್ಲ. ಮಂಪರು ಪರೀಕ್ಷೆ ಇತ್ಯಾದಿಗಳನ್ನು ಮನೋವಿಜ್ಞಾನಿಗಳು ಮಾಡುವ ವಿಶ್ಲೇಷಣೆ ಒಂದು ಬಲವಾದ ಊಹೆಯಾಗಬಹುದೇ ಹೊರತು ನಿಖರವಾಗಿ ಹೀಗೇನೆ ಎಂದು ಹೇಳಲು ಬರುವುದಿಲ್ಲ. ಮನಸ್ಸನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎನ್ನುತ್ತದೆ ಯೋಗವಾಸಿಷ್ಠ. ಮನುಷ್ಯನ ಮನಸ್ಸೇ ಬಂಧನ ಮತ್ತು ಮೋಕ್ಷ ಎರಡಕ್ಕೂ ಕಾರಣ ಎಂದು ಇದರ ಅರ್ಥ. ನಮ್ಮ ಗುರುವರ್ಯರು ತಮ್ಮ 'ಆತ್ಮನಿವೇದನೆ'ಯಲ್ಲಿ ಬರೆದಂತೆ 'ಮನುಷ್ಯನು ಹಾಳಾಗುವುದು ಮನಸ್ಸಿನಿಂದಲೇ, ಉದ್ಧಾರಾಗುವುದೂ ಮನಸ್ಸಿನಿಂದಲೇ'. ಒಂದರಿಂದಲೇ ಎರಡು ವಿಭಿನ್ನ ಹಾಗೂ ತದ್ವಿರುದ್ಧ ಸ್ಥಿತಿಗಳನ್ನು ಮುಟ್ಟುವುದು ಹೇಗೆ ಸಾಧ್ಯ? ಮನುಷ್ಯನ ಮನಸ್ಸು ನೀರು ಇದ್ದಂತೆ. ಹೂಗಿಡದ ಸುತ್ತ ಪಾತಿ ಮಾಡುವಾಗ ಕೈ ಕೆಸರಾಗುವುದೂ ನೀರಿನಿಂದಲೇ, ಕೈಗಂಟಿದ ಕೆಸರು ಹೋಗಿ ನಿರ್ಮಲವಾಗುವುದೂ ನೀರಿನಿಂದಲೇ ಅಲ್ಲವೇ? ದುರ್ವ್ಯಸನ ದುರಾಚಾರಗಳಲ್ಲಿ ತೊಡಗಿದ ಸ್ವೇಚ್ಛಾಚಾರದ ಮನಸ್ಸು ಬಂಧನಕ್ಕೆ/ದುಃಖಕ್ಕೆ ಕಾರಣವಾದರೆ, ಜಪತಪಾದಿಗಳಿಂದ ಶುದ್ಧವಾದ ಮನಸ್ಸು ಮೋಕ್ಷಕ್ಕೆ/ಶಾಂತಿಗೆ ಕಾರಣವಾಗುತ್ತದೆ.

ಮನುಷ್ಯನ ಮನಸ್ಸಿನೊಳಗೆ ಆಲೋಚನೆಗಳು ಹುಟ್ಟುತ್ತವೆ. ಈ ಆಲೋಚನೆಗಳು ಹೊರಗೆ ಅಭಿವ್ಯಕ್ತಗೊಳ್ಳುವುದು ಮೂರು ರೀತಿ: 1. ಶಾಬ್ದಿಕ, 2. ಆಂಗಿಕ 3. ಆಂಗಿಕಶಾಬ್ದಿಕ. ಮನುಷ್ಯನ ಆಲೋಚನೆಗಳು ಅವನು ಆಡುವ ಮಾತುಗಳಿಂದ ಅಭಿವ್ಯಕ್ತಗೊಳ್ಳಬಹುದು ಅಥವಾ ಅವನು ಮಾಡುವ ಅಂಗಾಂಗಗಳ ಹಾವಭಾವಗಳಿಂದ ಅಭಿವ್ಯಕ್ತಗೊಳ್ಳಬಹುದು ಅಥವಾ ಅವನ ಮಾತು ಮತ್ತು ಆಂಗಿಕ ಹಾವಭಾವಗಳೆರಡರಿಂದಲೂ ಒಟ್ಟೊಟ್ಟಿಗೇ ಅಭಿವ್ಯಕ್ತಗೊಳ್ಳಬಹುದು. ಉದಾಹರಣೆಗೆ ತಂದೆತಾಯಿಗಳು ಮಕ್ಕಳ ಮೇಲೆ ಕೋಪಗೊಂಡಾಗ ಬಯ್ಯುವುದು ಶಾಬ್ದಿಕ ಅಭಿವ್ಯಕ್ತಿ, ಏನೂ ಮಾತನಾಡದೆ ದುರುಗುಟ್ಟಿಕೊಂಡು ನೋಡಿ ಹುಬ್ಬುಗಂಟಿಕ್ಕುವುದು ಆಂಗಿಕ ಅಭಿವ್ಯಕ್ತಿ, ತೀರಾ ಸಿಟ್ಟಿಗೆದ್ದು ಬಯ್ಯುತ್ತಾ ಹೊಡೆಯುವುದು ಆಂಗಿಕ-ಶಾಬ್ದಿಕ ಅಭಿವ್ಯಕ್ತಿ.

ಮನಸ್ಸು ತುಂಬಾ ಚಂಚಲ. ಮನಸ್ಸಿನ ಚಂಚಲತೆಯನ್ನು ಬಸವಣ್ಣನವರು ಈ ಕೆಳಗಿನ ವಚನದಲ್ಲಿ ಬಹಳ ಚೆನ್ನಾಗಿ ನಿರೂಪಿಸಿದ್ದಾರೆ:

**ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು;**
**ನಿಂದಲ್ಲಿ ನಿಲ್ಲಲೀಯದೆನ್ನ ಮನವು**
**ಹೊಂದಿದಲ್ಲಿ ಹೊಂದಲೀಯದೆನ್ನ ಮನವು!**
**ಕೂಡಲಸಂಗಮದೇವಾ, ನಿಮ್ಮ ಚರಣಕಮಲದಲ್ಲಿ**
**ಭ್ರಮರನಾಗಿರಿಸು, ನಿಮ್ಮ ಧರ್ಮ!**

ಮನುಷ್ಯನ ಮನಸ್ಸು ಮರದ ಕೊಂಬೆಯ ಮೇಲೆ ಕೂತಿರುವ ಕೋತಿಯಂತೆ! ಮಂಗ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ಜಿಗಿಯುತ್ತಲೇ ಇರುತ್ತದೆ. ಅದು ಒಂದೆಡೆ ನಿಲ್ಲುವುದಿಲ್ಲ. ಅದರದು ಚಂಚಲ ಸ್ವಭಾವ. ಹಾಗೆಯೇ ಮನಸ್ಸು ಕೂಡ. ಅದಕ್ಕೇ ಏನೋ ಸರಿಯಾಗಿ ಗಮನ ಇಟ್ಟು ಕೇಳದೆ ಇರುವವರನ್ನು ಕುರಿತು 'ಏಯ್ ಮಂಗ, ಎತ್ಲಾಗ್ ನೋಡ್ತೀಯಾ, ಕೇಳಿಲ್ಲಿ!' ಎಂದು ಬಯ್ಯುವುದು ವಾಡಿಕೆಯಲ್ಲಿದೆ.

ಕೆಲವರು ಹೊರಗೆ ನೋಡಲು ಸಭ್ಯರಂತೆ ಕಾಣಿಸುತ್ತಾರೆ. ಅವರ ಮನಸ್ಸಿನೊಳಗೆ ಹುದುಗಿರುವ ಕ್ಷುದ್ರತನ ಕಾಣಿಸುವುದಿಲ್ಲ. ಅಂಥವರನ್ನು ಬಸವಣ್ಣನವರು ಅತ್ತಿಯ ಹಣ್ಣಿಗೆ ಹೋಲಿಸುತ್ತಾರೆ.

**ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ;**
**ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ!**
**ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹ ಮಾಡಿ**
**ನೀವಿರಿಸಿದಿರಿ, ಕೂಡಲ ಸಂಗಮದೇವಾ.**

ಅತ್ತಿಯ ಹಣ್ಣು ಹೊರಗೆ ನೋಡಲು ಕೆಂಪಾಗಿ ಸುಂದರವಾಗಿ ಕಾಣಿಸುತ್ತದೆ. ಆದರೆ ತಿನ್ನಲು ಚೆನ್ನಾಗಿದೆಯೆಂದು ಕೈಗೆತ್ತಿಕೊಂಡರೆ ಕೆಲವೊಂದು ಅತ್ತಿಯ ಹಣ್ಣಿನೊಳಗೆಲ್ಲಾ ಬರೀ ಹುಳುಗಳೇ ಇರುತ್ತವೆ. ಹೀಗೆ ಮನುಷ್ಯ ಹೊರಗೆ ನೋಡಲು ಚೆನ್ನಾಗಿದ್ದು ಒಳಗೆ ಕೊಳಕು ಮನಸ್ಸು ಉಳ್ಳವನಾಗಿರಬಾರದು ಎಂಬುದು ಬಸವಣ್ಣನವರ ದಿವ್ಯ ಸಂದೇಶ. ಇದೆಲ್ಲಾ ಜನರಿಗೆ ಗೊತ್ತಿಲ್ಲವೆಂದೇನೂ ಇಲ್ಲ. ದೈನಂದಿನ ವ್ಯವಹಾರಗಳಲ್ಲಿ ಜನರು ಎಷ್ಟೊಂದು ಜಾಣರಿರುತ್ತಾರೆ. ನೋಡಿದರೆ ಆಶ್ಚರ್ಯವಾಗುತ್ತದೆ. ಮಾರುಕಟ್ಟೆಯಲ್ಲಿ ಒಂದು ಕಲ್ಲಂಗಡಿಹಣ್ಣು ಕೊಳ್ಳುವಾಗ ಹಣ್ಣು ನೋಡಲು ಎಷ್ಟೇ ಚೆನ್ನಾಗಿದ್ದರೂ ಗ್ರಾಹಕರು ಸುಮ್ಮನೆ ತೆಗೆದುಕೊಂಡು ಹೋಗುವುದಿಲ್ಲ. ಹಣ್ಣು ಮಾರುವವನಿಗೆ 'ಚಂದ್ರಿಕೆ' ಹಾಕಿ ಅಂದರೆ ಅದನ್ನು ಸ್ವಲ್ಪ ಕೊಯ್ದು ತೋರಿಸಲು ಕೇಳುತ್ತಾರೆ. ಹೊರಗೆ ಏನೋ ಚೆನ್ನಾಗಿದೆ, ಒಳಗೆ ಹೇಗಿದೆ ನೋಡಬೇಕೆಂಬ ವ್ಯಾವಹಾರಿಕ ಜ್ಞಾನ ಅವರದು. ಇಷ್ಟು ವ್ಯಾವಹಾರಿಕ ಜ್ಞಾನ ಸಾಮಾನ್ಯ ಜನರಿಗೆ ಇರುವಾಗ ಭಕ್ತರು ಬೇಡುವ ವರವನ್ನು ಅನುಗ್ರಹಿಸಲು ದೇವರೇನು ದಡ್ಡನೇ? ಭಕ್ತರ ಮೈಮನಸ್ಸನ್ನು ದೇವರು ಅದೆಷ್ಟು 'ಚಂದ್ರಿಕೆ' ಹಾಕಿ ನೋಡಬೇಡ! 'ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ' ಎಂದು ಬಸವಣ್ಣನವರು ಮತ್ತೊಂದೆಡೆ ಹೇಳಿದ್ದು ಈ ಅರ್ಥದಲ್ಲಿ.

ಒಮ್ಮೊಮ್ಮೆ ಮನಸ್ಸನ್ನು 'ಹಾಳು ಮನಸ್ಸು' ಎಂದು ಹಳಿಯುತ್ತಾರೆ. ಹಾಗೆನ್ನುವುದು ತಪ್ಪು. ಮನಸ್ಸು ಹಾಳಲ್ಲ, ಅದೊಂದು ಇಂದ್ರಿಯ. ಮನಸ್ಸಿನಲ್ಲಿ ಕೆಟ್ಟ (ಹಾಳು) ವಿಚಾರಗಳು ಬಂದರೆ ಅದು ಕೆಟ್ಟ ಮನಸ್ಸು. ಒಳ್ಳೆಯ ವಿಚಾರಗಳು ಬಂದರೆ ಅದು ಒಳ್ಳೆಯ ಮನಸ್ಸು. ಆಲೋಚನೆಗಳು ಎಂಥವು ಎಂಬುದರ ಮೇಲೆ ಮನಸ್ಸು ಕೆಟ್ಟ ಮನಸ್ಸೋ ಅಥವಾ ಒಳ್ಳೆಯ ಮನಸ್ಸೋ ಎಂಬುದು ನಿರ್ಧಾರವಾಗುತ್ತದೆ. ಆದರೆ ಲೋಕಾರೂಢಿಯಲ್ಲಿ 'ಹಾಳುಮನಸ್ಸು' ಎಂಬ ಹೀನ ಅರ್ಥದ ಪ್ರಯೋಗ ಬಂದುಬಿಟ್ಟಿದೆ. ಉದಾಹರಣೆಗೆ 'ವಾಸನೆ' ಎಂಬ ಶಬ್ದಕ್ಕೆ ಬಂದಿರುವ ಹೀನಾರ್ಥ. ಹರಿಹರದ ಪಾಲಿಫೈಬರ್ಸ್ ಫ್ಯಾಕ್ಟರಿಯ ಹತ್ತಿರ ಬಂದಾಗ ಜನರು 'ಥೂ, ವಾಸನೆ!' ಎಂದು ಮೂಗು ಮುಚ್ಚುತ್ತಾರೆ. ಇಲ್ಲಿ ವಾಸನೆ ಎಂದರೆ ಕೆಟ್ಟ ವಾಸನೆ ಎಂದೇ ಅರ್ಥ. ಆದರೆ ವಾಸನೆ ಎಂಬ ಶಬ್ದದ ಅರ್ಥ ದುರ್ವಾಸನೆ ಎಂದೂ ಅಲ್ಲ, ಸುವಾಸನೆ ಎಂದೂ ಅಲ್ಲ. ಅದು ಮೂಗು ಗ್ರಹಿಸುವ ಒಂದು ಸಂವೇದನೆ ಮಾತ್ರ. ಅದು ಒಳ್ಳೆಯದೂ ಆಗಿರಬಹುದು, ಕೆಟ್ಟದ್ದೂ ಆಗಿರಬಹುದು. ಹೀಗೆ ಹೀನಾರ್ಥದಲ್ಲಿ ಬಳಕೆಯಾಗುತ್ತಿರುವ ಮತ್ತೊಂದು ಶಬ್ದವೆಂದರೆ, 'ಕುಡಿಯುವುದು'. ಕುಡಿಯುವುದೆಂದರೆ ಈಗ ಹೆಂಡ ಕುಡಿಯುವುದು, ಮದ್ಯ ಸೇವಿಸುವುದು ಎಂದೇ ಅರ್ಥ. ವಾಸ್ತವವಾಗಿ ಕುಡಿಯುವುದು ಎಂದರೆ ಮದ್ಯ ಸೇವಿಸುವುದು ಎಂದೇನೂ ಅಲ್ಲ. ಕುಡಿಯುವುದು ಮಜ್ಜಿಗೆ ಇರಬಹುದು, ಹಾಲು ಆಗಿರಬಹುದು, ಶರಬತ್ತು ಆಗಿರಬಹುದು, ಹಣ್ಣಿನ ರಸವೂ ಆಗಿರಬಹುದು; ಮದ್ಯವೇ ಆಗಿರಬೇಕೆಂದೇನೂ ಇಲ್ಲ. ಆದರೆ 'ಅವನು ತುಂಬಾ ಕುಡಿಯುತ್ತಾನೆ' ಎಂದರೆ 'ಮಜ್ಜಿಗೆಯನ್ನೋ, ಶರಬತ್ತನ್ನೋ, ಟೀ ಕಾಫಿಯನ್ನೋ ಕುಡಿಯುತ್ತಾನೆ?' ಎಂಬ ಅರ್ಥ ಈಗ ಉಳಿದಿಲ್ಲ. ಅವನು ತುಂಬಾ ಕುಡುಕ ಎಂದೇ ಅರ್ಥ. ಹೀಗಾಗಿ ಮನೆಗೆ ಬಂದ ಅತಿಥಿಗಳನ್ನು "ಕುಡಿಯುವುದಕ್ಕೆ ಏನಾದರೂ ಬೇಕೇ?" ಎಂದು ಕೇಳಲು ಮುಜುಗರಪಟ್ಟುಕೊಳ್ಳುವಂಥ ಪರಿಸ್ಥಿತಿ ಈಗ ಒದಗಿ ಬಂದಿದೆ. ಹೀಗೆ 'ಕುಡಿಯುವುದು' ಎಂಬ ಪದ ತನ್ನಲ್ಲಿ ಇಲ್ಲದ ಕೆಟ್ಟ ಅರ್ಥವನ್ನು ಪಡೆದುಬಿಟ್ಟಿದೆ. ಇದರಂತೆಯೇ 'ಹಾಳು ಮನಸ್ಸು' ಎಂಬ ಪದ ಪ್ರಯೋಗ ಕೂಡ.

ಮನಸ್ಸೂ ಒಂದು ಅಗೋಚರವಾದ ಇಂದ್ರಿಯ. ಅಲ್ಲಿ ಸುಳಿಯುವ ಆಲೋಚನೆಗಳು ಒಳ್ಳೆಯವಾದಾಗ ಮನಸ್ಸು ಒಳ್ಳೆಯದಾಗಿರುತ್ತದೆ, ಕೆಟ್ಟವಾದಾಗ ಕೆಟ್ಟದ್ದಾಗಿರುತ್ತದೆ. ಇಂದ್ರಿಯಗಳಿಗೆ ಸಂವೇದನೆಗಳನ್ನು ಗ್ರಹಿಸುವ ಕ್ಷಮತೆ ಇದೆ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮಗಳು ಕ್ರಮವಾಗಿ ರೂಪ, ಶಬ್ದ, ಗಂಧ, ರಸ ಹಾಗೂ ಸ್ಪರ್ಶಗಳನ್ನು ಗ್ರಹಿಸುತ್ತವೆ. ಇಂದ್ರಿಯಗಳ ಈ ಗ್ರಹಿಕೆಗೆ ಮನಸ್ಸಿನ ಸಾಹಚರ್ಯವಿಲ್ಲದೆ ಸಾಧ್ಯವಿಲ್ಲ. ಒಂದು ವಸ್ತುವು ಕಣ್ಣೆದುರಿಗೆ ಇದ್ದರೂ ಮನಸ್ಸು ಎಲ್ಲಿಯೋ ಇದ್ದರೆ ನೋಡಿದ ನೋಟದ ಗ್ರಹಿಕೆ ಉಂಟಾಗುವುದಿಲ್ಲ. ಅಂಚೆಯ ಪೇದೆಯು ತಂದು ಕೊಟ್ಟ ಪತ್ರವು ತನ್ನ ಪ್ರಿಯಕರನು ಬರೆದ ಪತ್ರವೆಂದು ತಿಳಿದ ಪ್ರೇಯಸಿಗೆ ಆ ಪತ್ರವನ್ನು ಲಗುಬಗೆನೆ ಒಡೆದು ಓದುವಾಗ ಅವಳ ಕಣ್ಣೆದುರಿಗೆ ಕಾಣಿಸುವುದು ಕಾಗದವಲ್ಲ; ಮಂದಹಾಸ ಬೀರುವ ತನ್ನ ಪ್ರಿಯತಮನ ಮುಖ! ಆದು ಬೇರೆಯವರ ಕಣ್ಣಿಗೆ ಕಾಣಿಸುವುದಿಲ್ಲ. ಅಂತಹ ಪ್ರಸಂಗಗಳು ಬಂದಾಗ ಚಲನಚಿತ್ರಕಾರರು ಆ ಪತ್ರಗಳಲ್ಲಿ ಬರೆದ ವ್ಯಕ್ತಿಯ ಮುಖವನ್ನು superimpose ಮಾಡಿ ಬಿಂಬಿಸುವುದುಂಟು!

ಉಪನಿಷತ್ತುಗಳಲ್ಲಿ ಇಂದ್ರಿಯಜನ್ಯಜ್ಞಾನದ ವಿಚಾರ ವಿಸ್ತಾರವಾಗಿ ಬರುತ್ತದೆ. ಎದುರಿಗೆ ಕುರ್ಚಿ ಇದೆ ಎಂದಿಟ್ಟುಕೊಳ್ಳೋಣ. ಅದರ ಅನುಭವ ನೋಡುವವರಿಗೆ ಆಗುವುದು ಹೇಗೆ? ಕಣ್ಣಿನ ತಜ್ಞರು ಹೇಳುತ್ತಾರೆ - ಕುರ್ಚಿಯ ಬಿಂಬವು ಬೆಳಕಿನ ಮೂಲಕ ಹರಿದು ಕಣ್ಣಿನೊಳಗಣ ಅಕ್ಷಿಪಟಲದ ಮೇಲೆ ತಿರುವುಮುರುವಾಗಿ ಬೀಳುತ್ತದೆ. ಅಲ್ಲಿನ ನರತಂತುಗಳು ಸಂದೇಶವನ್ನು ಮೆದುಳಿನ ಸಂಬಂಧಪಟ್ಟ ಭಾಗಕ್ಕೆ ಸಂಕೇತಗಳ ಮೂಲಕ ರವಾನಿಸುತ್ತವೆ. ಮೆದುಳು ಆ ತಿರುವು ಮುರುವಾದ ಬಿಂಬವನ್ನು ಸರಿಯಾಗಿ ಗ್ರಹಿಸುತ್ತದೆ. ಕಠೋಪನಿಷತ್ ಹೇಳುವ ಪ್ರಕಾರ **'ಆತ್ಮೇಂದ್ರಿಯಮನೋಯುಕ್ತಂ ಭೋಕ್ತಾ ಇತ್ಯಾಹುಃ ಮನೀಷಿಣಃ'**. ಆತ್ಮ-ಇಂದ್ರಿಯ-ಮನಸ್ಸು ಈ ಮೂರರ ಸಂಬಂಧದಿಂದ ಸಂವೇದನೆ ಉಂಟಾಗುತ್ತದೆ. ಆ ಸಂವೇದನೆಯನ್ನು ಪಡೆಯುವ ಜೀವಾತ್ಮನೇ ಭೋಕ್ತಾರ. ಆತ್ಮವಿಲ್ಲವೆಂದರೆ ಚೈತನ್ಯವಿಲ್ಲ; ಚೈತನ್ಯ ಇಲ್ಲವೆಂದರೆ ಇಂದ್ರಿಯಜನ್ಯ ಜ್ಞಾನವೂ ಇಲ್ಲ, ಅನುಭವವೂ ಇಲ್ಲ. ಇವೆಲ್ಲವೂ ಇದ್ದೂ ಮನಸ್ಸು ಬೇರೆಡೆ ಇದ್ದರೆ ಆಗಲೂ ಸಂವೇದನೆ ಉಂಟಾಗುವುದಿಲ್ಲ. ಏಕೆಂದರೆ ಎಲ್ಲಿಯೋ

ಇರುವ ಮನಸ್ಸಿಗೆ ಬಾಹ್ಯೇಂದ್ರಿಯಗಳೊಂದಿಗಿನ ಸಂಪರ್ಕ ಕಡಿದುಹೋಗುವುದರಿಂದ ಇಂದ್ರಿಯಗಳ ಮುಖಾಂತರ ಉಂಟಾಗುವ ಜ್ಞಾನ ಸಾಧ್ಯವಾಗುವುದಿಲ್ಲ. ಉಪನಿಷತ್ತುಗಳ ಪ್ರಕಾರ ಈ ಮೂರರ (ಆತ್ಮ-ಇಂದ್ರಿಯ-ಮನಸ್ಸು) ಸಂಯೋಗದಿಂದಲೇ ಬಾಹ್ಯ ವಸ್ತುವಿನ ಅನುಭವವು ಮನುಷ್ಯನಿಗೆ ಉಂಟಾಗುವುದು. ಇಂದ್ರಿಯಗಳ ಮುಖಾಂತರ ಉಂಟಾಗುವ ಮನಸ್ಸಿನ ಗ್ರಹಿಕೆಗೆ ಚೈತನ್ಯ ಬೇಕೇ ಬೇಕು. ಚೈತನ್ಯವು ತಂತಿಗಳಲ್ಲಿ ಪ್ರವಹಿಸುವ ವಿದ್ಯುಚ್ಛಕ್ತಿ ಇದ್ದಂತೆ. ವಿದ್ಯುಚ್ಛಕ್ತಿ ಇಲ್ಲದೇ ಹೋದರೆ ಎಲ್ಲ ಯಂತ್ರಗಳೂ ನಿಷ್ಕ್ರಿಯವಾಗಿಬಿಡುತ್ತವೆ. ಹಾಗೇನೆ ಚೈತನ್ಯವೇ ಇಲ್ಲದ ಮೃತ ಶರೀರಕ್ಕೆ ಕಣ್ಣಿದ್ದರೂ, ಕಿವಿಯಿದ್ದರೂ ತನ್ನ ಸುತ್ತ ಸೇರಿರುವ ಬಂಧುಗಳನ್ನು ನೋಡಲು, ಅವರ ಆಕ್ರಂದನವನ್ನು ಕೇಳಲು ಆಗುವುದಿಲ್ಲ. 'ಊರು ಉಪಕಾರ ಅರಿಯದು, ಹೆಣ ಶೃಂಗಾರ ಅರಿಯದು' ಎಂಬ ಗಾದೆಯೇ ಇದೆ. ಇನ್ನು ಚೈತನ್ಯದಿಂದ ತುಂಬಿದ ಜೀವಂತ ವ್ಯಕ್ತಿಗೆ ಕಣ್ಣಿದ್ದೂ, ಕಿವಿಯಿದ್ದೂ ತನ್ನ ಒಳಹೊರಗೆ ಇರುವ ನಿಗೂಢ ಸತ್ಯವನ್ನು ಕಾಣಲು, ಕೇಳಲು ಆಗುವುದಿಲ್ಲ. ಈ ವಿಚಾರದಲ್ಲಿ ಬಸವಣ್ಣನವರ ಮತ್ತು ಅಕ್ಕಮಹಾದೇವಿಯ ಈ ಮುಂದಿನ ವಚನಗಳಲ್ಲಿ ವಿಭಿನ್ನ ನಿಲುವನ್ನು ಕಾಣಬಹುದಾಗಿದೆ:

**ಕಣ್ಣೊಳಗೆ ಕಣ್ಣಿದ್ದೂ ಕಾಣಲೇಕರಿಯರಯ್ಯಾ?**
**ಕಿವಿಯೊಳಗೆ ಕಿವಿಯಿದ್ದೂ ಕೇಳಲೇಕರಿಯರಯ್ಯಾ?**
**ಘ್ರಾಣದೊಳಗೆ ಘ್ರಾಣವಿದ್ದೂ ವಾಸಿಸಲೇಕರಿಯರಯ್ಯಾ?**
**ಜಿಹ್ವೆಯೊಳಗೆ ಜಿಹ್ವೆಯಿದ್ದೂ ರುಚಿಸಲೇಕರಿಯರಯ್ಯಾ?**
**ಸ್ಪರ್ಶನದೊಳಗೆ ಸ್ಪರ್ಶನವಿದ್ದೂ ಮುಟ್ಟಲೇಕರಿಯರಯ್ಯಾ?**
**ಪ್ರಾಣದೊಳಗೆ ಪ್ರಾಣವಿದ್ದೂ ನೆನೆಯಲೇಕರಿಯರಯ್ಯಾ?**
**ಕಾಯದೊಳಗೆ ಕಾಯವಿದ್ದೂ ಬಿಡದು, ಬೇರಾಗದು!**
**ನೀನಿಕ್ಕಿದ ಅಣಕದ ಭೇದವ ಭೇದಿಸಬಾರದಯ್ಯಾ!**
**ಕೂಡಲಸಂಗಮದೇವಾ. (ಬಸವಣ್ಣನವರು)**

ಶರೀರದೊಳಗಿರುವ ನಿಗೂಢ ಸತ್ಯದ ಅರಿವು ಜೀವಾತ್ಮನಿಗೆ ಉಂಟಾಗದ ರೀತಿಯಲ್ಲಿ ದೇವರು ಮನುಷ್ಯನ ಭೌತಿಕ ಇಂದ್ರಿಯಗಳಿಗೆ ಗೋಚರಿಸದಂತೆ ಮರೆಮಾಡಿದ್ದಾನೆ. ಅದರ ಸಾಕ್ಷಾತ್ಕಾರ ಅಷ್ಟು ಸುಲಭದ ಮಾತಲ್ಲ ಎಂಬುದು ಬಸವಣ್ಣನವರ ನಿಲುವು. ಅಂತಹ ಸತ್ಯದ ಸಾಕ್ಷಾತ್ಕಾರಕ್ಕೆ ಪ್ರಯತ್ನವನ್ನು ಮಾಡಲು ಜನರು ಮುಂದಾಗುವುದಿಲ್ಲವೆಂಬುದು ಅಕ್ಕಮಹಾದೇವಿಯ ನಿಲುವು. 'ಶಿಲೆಯೊಳಗಣ ಪಾವಕನಂತೆ' ಚೈತನ್ಯರೂಪಿ ಆತ್ಮ ಶರೀರದೊಳಗೆ ಅಡಗಿದ್ದಾನೆ. ಕಲ್ಲೊಳಗೆ ಬೆಂಕಿ ಇದ್ದರೂ ಅದು ಕಣ್ಣಿಗೆ ಹೇಗೆ ಕಾಣುವುದಿಲ್ಲವೋ ಹಾಗೆ. ಕಲ್ಲಿಗೆ ಕಲ್ಲು ತಾಗಿದಾಗ ಮಾತ್ರ ಬೆಂಕಿಯ ಕಿಡಿ ಹಾರುತ್ತದೆ, ಕಣ್ಣಿಗೆ ಗೋಚರಿಸುತ್ತದೆ. ಹಾಗೆ ನಿಗೂಢ ಸತ್ಯದ ಅರಿವು ಅನುಭಾವದಿಂದ ಮಾತ್ರ ಸಾಧ್ಯ. ಅದರ ಬಗ್ಗೆ ಸಾಮಾನ್ಯ ಜನರು ತಮ್ಮ ತಲೆಯನ್ನೇ ಕೆಡಿಸಿಕೊಳ್ಳಲು ಹೋಗುವುದಿಲ್ಲವೆಂದು ಮೂದಲಿಸುವ ಅಕ್ಕಮಹಾದೇವಿಯ ಮಾತು ಹೀಗಿದೆ:

**ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು**
**ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು**
**ಅಗಸ ನೀರೊಳಗಿದ್ದು ಬಾಯಾರಿ ಸತ್ತಂತೆ,**
**ತನ್ನೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ!**

ದಿನವಿಡೀ ನೀರೊಳಗೆ ನಿಂತು ಬಟ್ಟೆ ಸೆಳೆಯುವ ಅಗಸನೊಬ್ಬ ಬಾಯಾರಿಕೆಯಿಂದ ಸತ್ತನೆಂದರೆ ಯಾರಿಗೆ ತಾನೆ ನಗು ಬರುವುದಿಲ್ಲ! ನೀರಲ್ಲೇ ಇದ್ದು ಬಾಯಾರಿ ಸತ್ತನೆಂದರೆ ಹೇಗೆ? ಹಾಗಾಗಿದೆ ಮನುಷ್ಯನ ಪರಿಸ್ಥಿತಿ. ದಿನವಿಡೀ ಹೊಟ್ಟೆಪಾಡಿಗಾಗಿ ಹಣಸಂಪಾದನೆಯಲ್ಲಿ ಮಗ್ನನಾಗಿ, ದುಡಿದ ಹಣವನ್ನು ಇಡೀ ರಾತ್ರಿ ಕುಡಿತ, ಜೂಜು, ಮೋಜುಗಳಿಗೆ ವ್ಯಯಮಾಡಿ ದುರ್ವ್ಯಸನ ದುರಾಚಾರಗಳಲ್ಲಿ ಮಗ್ನನಾಗುವ ವ್ಯಕ್ತಿಗೆ ತನ್ನೊಳಗೇ ಇರುವ ಆ ಮಹಾಘನವನ್ನು ಅರಿಯಲು ವೇಳೆಯಾದರೂ ಎಲ್ಲಿದೆ? ಎಂದು ಪ್ರಶ್ನಿಸುತ್ತಾಳೆ ಅಕ್ಕಮಹಾದೇವಿ. ಮನುಷ್ಯ ತಪ್ಪು ಮಾಡುವುದು ಸಹಜ. ಅದನ್ನೇ ದೊಡ್ಡದು ಮಾಡಿ ಹೀಗಳೆಯುವುದು ಸರಿಯಲ್ಲ. ಈ ಶರೀರದ ಗುಣವೇ ಅಂತಹದು. ಸಾಕ್ಷಾತ್ ದೇವರೇ ಧರೆಗೆ ಇಳಿದುಬಂದು ಮನುಷ್ಯನ ಶರೀರ ಧರಿಸಿದರೆ ಅವನೂ ಸಹ ದೇವರಾಗಿ ಉಳಿಯಲು ಸಾಧ್ಯವಿಲ್ಲ. ಅವನಿಗೂ ಇದೇ ಸ್ಥಿತಿ ಉಂಟಾಗುತ್ತದೆ ಎನ್ನುತ್ತಾನೆ ದೇವರದಾಸಿಮಯ್ಯ: "ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ, ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ, ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ!" ಈ ಮಾತು ಹೇಳಿದ್ದು ಮನುಷ್ಯನ ದೌರ್ಬಲ್ಯಗಳನ್ನು ಸಮರ್ಥಿಸಿಕೊಳ್ಳುವುದಕ್ಕಲ್ಲ; ಮನುಷ್ಯನು ತನ್ನ ದೌರ್ಬಲ್ಯಗಳನ್ನು ಮೆಟ್ಟಿನಿಲ್ಲಲು ಸಾಧಕನಾಗಿ ಎಂತಹ ಹರಸಾಹಸ ಮಾಡಬೇಕಾಗುತ್ತದೆ ಎಂಬ ವಾಸ್ತವತೆಯ ಕಡೆ ಗಮನ ಸೆಳೆದು ಎಚ್ಚರಿಸಲು!

10.12.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑